ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 501
2. ಸದಸ್ಯರ ಹೆಸರು : ಶ್ರೀ ಎನ್.ಅಪ್ಪಾಜಿಗೌಡ
3. ಉತ್ತರಿಸಬೇಕಾದ ದಿನಾಂಕ : 24-09-2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ</td><td>ಮಂಡ್ಯ ಜಿಲ್ಲೆಯ, ನಾಗಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಂ.7, ಕಾರ್ಯಪಾಲಕ ಅಭಿಯಂತರರ ಕಛೇರಿ, ಹೇಮಾವತಿ ನಾಲಾ ವಿಭಾಗ, ನಾಗಮಂಗಲ ಮತ್ತು ಕಾರ್ಯಪಾಲಕ ಅಭಿಯಂತರರು, ಯಡಿಯೂರು ವಿಭಾಗ ವ್ಯಾಪ್ತಿಯಲ್ಲಿ ಬರುವ ಕಾಲುವೆಗಳಲ್ಲಿ ನೀರು ಹರಿಸುವ ಸಂಬಂಧ ಕಾಲುವೆಗಳ ದುರಸ್ಥಿ ಅಥವಾ ಆಧುನೀಕರಣ ಮಾಡಲು 2018-19 ನೇ ಸಾಲಿನಿಂದ ಇಲ್ಲಿಯವರೆಗೆ ಮಂಜೂರಾಗಿರುವ ಕಾಮಗಾರಿಗಳಾವುವು? (ವಿವರವಾದ ಮಾಹಿತಿ ನೀಡುವುದು)</td><td>ಮಂಡ್ಯ ಜಿಲ್ಲೆಯ ನಾಗಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ನಂ.7, ಹೇಮಾವತಿ ನಾಲಾ ವಿಭಾಗ, ನಾಗಮಂಗಲ ಮತ್ತು ಹೇಮಾವತಿ ನಾಲಾ ವಿಭಾಗ, ಯಡಿಯೂರು ವ್ಯಾಪ್ತಿಯಲ್ಲಿ ಬರುವ ಕಾಲುವೆಗಳಲ್ಲಿ ನೀರು ಹರಿಸುವ ಸಂಬಂಧ 2018-19 ನೇ ಸಾಲಿನಿಂದ ಇಲ್ಲಿಯವೆಗೆ ಅನುಮೋದನೆಯಾಗಿರುವ ಕಾಲುವೆಗಳ ದುರಸ್ಥಿ / ಆಧುನೀಕರಣ ಕಾಮಗಾರಿಗಳ ಘೋಷ್ವಾರೆ ಇಂತಿದೆ:

(ರೂ. ಲಕ್ಷಗಳಲ್ಲಿ)
<table>
<tr><th rowspan="2">ಕ್ರ ಸಂ</th><th rowspan="2">ವಿಭಾಗ</th><th rowspan="2">ಶೀರ್ಷಿಕೆ</th><th colspan="2">2018-19</th><th colspan="2">2019-20</th><th colspan="2">2020-21</th></tr>
<tr><th>ಕಾಮಗಾರಿ ಸಂಖ್ಯೆ</th><th>ಅಂದಾಜು ಮೊತ್ತ</th><th>ಕಾಮಗಾರಿ ಸಂಖ್ಯೆ</th><th>ಅಂದಾಜು ಮೊತ್ತ</th><th>ಕಾಮಗಾರಿ ಸಂಖ್ಯೆ</th><th>ಅಂದಾಜು ಮೊತ್ತ</th></tr>
<tr><td rowspan="2">1</td><td rowspan="2">ನಾಗಮಂಗಲ</td><td>4701</td><td>11</td><td>7170.84</td><td>-</td><td>-</td><td>-</td><td>-</td></tr>
<tr><td>2701</td><td>13</td><td>30.25</td><td>26</td><td>68.85</td><td>10</td><td>75.00</td></tr>
<tr><td rowspan="2">2</td><td rowspan="2">ಯಡಿಯೂರು</td><td>4701</td><td>-</td><td>-</td><td>-</td><td>-</td><td>-</td><td>-</td></tr>
<tr><td>2701</td><td>6</td><td>13.95</td><td>6</td><td>146.40</td><td>7</td><td>82.75</td></tr>
<tr><td colspan="3">ಒಟ್ಟು :</td><td>30</td><td>7215.04</td><td>32</td><td>215.25</td><td>17</td><td>157.75</td></tr>
</table>
ಕಾಮಗಾರಿವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಆ</td><td>ಈ ಮೇಲ್ಕಂಡ ಕಾಮಗಾರಿಗಳಲ್ಲಿ ಟೆಂಡರ್ ಮೊತ್ತಕ್ಕಿಂತ ಶೇಕಡಾ 35-45 ಕಡಿಮೆ ದರಕ್ಕೆ ಗುತ್ತಿಗೆದಾರರು ಟೆಂಡರ್ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಲು ಸಾಧ್ಯವೇ; (ವಿವರವಾದ</td><td>➢ ಈ ಮೇಲ್ಕಂಡ ಎಲ್ಲಾ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ ಕಾಯ್ದೆಯನ್ವಯ, ಇ-ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲಾಗುತ್ತಿದ್ದು, ಇ-ಪೋರ್ಟಲ್‌ನಲ್ಲಿ ದರಗಳನ್ನು ನಮೂದಿಸುವ ಅಧಿಕಾರವು ಗುತ್ತಿಗೆದಾರರ ವಿವೇಚನೆಗೆ ಒಳಪಟ್ಟಿರುವುದರಿಂದ, ಸ್ಪರ್ಧಾತ್ಮಕ ಟೆಂಡರ್‌ಗಳಲ್ಲಿ ಅತಿ ಕಡಿಮೆ ದರಗಳನ್ನು ನಮೂದಿಸುವ ಗುತ್ತಿಗೆದಾರರ ಟೆಂಡರ್ ಗಳನ್ನು ಸಕ್ಷಮ ಪ್ರಾಧಿಕಾರಗಳಿಂದ ನಿಯಮಾನುಸಾರ ಅನುಮೋದಿಸಿಕೊಂಡು, ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಂಡು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
➢ 4701- ಕ್ಯಾಪಿಟಲ್ ಕಾಮಗಾರಿಗಳಡಿಯಲ್ಲಿ ನಾಲಾ ಆಧುನೀಕರಣ, ನಾಲಾ ಅಭಿವೃದ್ಧಿ, ಸಿ.ಡಿಗಳ ನಿರ್ಮಾಣ ಹಾಗೂ ಇನ್ನಿತರೆ ಅವಶ್ಯಕ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಕಾಮಗಾರಿಗಳ ಗುಣಮಟ್ಟದ ಪರೀಕ್ಷೆಗಳನ್ನು</td></tr>
</table>

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
	ಮಾಹಿತಿ ನೀಡುವುದು)	ನಿಗಧಿಪಡಿಸಿದ IS Code-4926:2003, IS-456 (cement concrete), IS-2720 (Embankemnt construction) ನಲ್ಲಿನ ವಿಶಿಷ್ಟ ವಿವರಣೆಗಳನ್ವಯ ಸ್ಯಾಂಪಲ್ಸ್‌ಗಳನ್ನು ತೆಗೆದುಕೊಂಡು ಸಂಬಂಧಿಸಿದ ಗುಣನಿಯಂತ್ರಣ ಉಪವಿಭಾಗ / ವಿಭಾಗಗಳಿಂದ ಕಾಮಗಾರಿಗಳ ಗುಣಮಟ್ಟವನ್ನು ದೃಢೀಕರಿಸಿಕೊಂಡು ನಿಯಮಾನುಸಾರ ನಿರ್ವಹಿಸಲಾಗುತ್ತಿದೆ. ಕಾಮಗಾರಿಗಳ ಗುಣಮಟ್ಟಕ್ಕೆ ಸಂಬಂಧಿಸಿದ ಅವಶ್ಯಕ ದಾಖಲೆಗಳನ್ನು ವಿಭಾಗ ಕಾರ್ಯಾಲಯದಲ್ಲಿ ನಿರ್ವಹಿಸಲಾಗಿದ್ದು, ಸಾರ್ವಜನಿಕರ ಮಾಹಿತಿಗೂ ಕೂಡ ಲಭ್ಯವಿರುತ್ತದೆ. ➢ 2701 – ನಿರ್ವಹಣಾ ಲೆಕ್ಕ ಶೀರ್ಷಿಕೆಯಡಿಯಲ್ಲಿನ ಕಾಮಗಾರಿಗಳನ್ನು ಸಹಾ ಇ-ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲಾಗುತ್ತಿದ್ದು, ಇ-ಪೋರ್ಟಲ್ ರಲ್ಲಿ ದರಗಳನ್ನು ನಮೂದಿಸುವ ಅಧಿಕಾರವು ಗುತ್ತಿಗೆದಾರರ ವಿವೇಚನೆಗೆ ಒಳಪಟ್ಟಿರುವುದರಿಂದ, ಸ್ಪರ್ಧಾತ್ಮಕ ಟೆಂಡರ್ ಗಳಲ್ಲಿ ಅತಿ ಕಡಿಮೆ ದರಗಳನ್ನು ನಮೂದಿಸುವ ಗುತ್ತಿಗೆದಾರರ ಟೆಂಡರ್ ಗಳನ್ನು ಸಕ್ಷಮ ಪ್ರಾಧಿಕಾರಗಳಿಂದ ನಿಯಮಾನುಸಾರ ಅನುಷ್ಠಾನಗೊಳಿಸಿ ನಾಲೆಗಳಲ್ಲಿ ಸರಾಗವಾಗಿ ನೀರನ್ನು ಹರಿಸಲು ಕ್ರಮ ವಹಿಸಲಾಗಿದೆ. ನಿರ್ವಹಣಾ ಕಾಮಗಾರಿಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಛಾಯಾಚಿತ್ರಗಳನ್ನು ಸಹಾ ತೆಗೆಯಲಾಗಿದ್ದು, ಸದರಿ ಮಾಹಿತಿಗಳನ್ನು ವಿಭಾಗ ಕಾರ್ಯಾಲಯಗಳಲ್ಲಿ ನಿರ್ವಹಿಸಲಾಗಿದೆ.
ಇ	ಈ ಸಂಬಂಧ ಗುತ್ತಿಗೆದಾರರು ಮತ್ತು ಇಲಾಖಾ ಅಧಿಕಾರಿಗಳು ಕಾಮಗಾರಿ ಮಾಡದೆ ಬಿಲ್ಲು ಪಡೆಯುವ ಉದ್ದೇಶವಿದೆಯೇ; ಈ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ತಡೆಹಿಡಿದು ಉನ್ನತ ಮಟ್ಟದ ತನಿಖಾ ತಂಡದಿಂದ ತನಿಖೆ ಮಾಡುವ ಉದ್ದೇಶ ಸರ್ಕಾರದ ಮುಂದೆ ಇದೆಯೇ? (ವಿವರವಾದ ಮಾಹಿತಿ ನೀಡುವುದು)	ಎಲ್ಲಾ ಕಾಮಗಾರಿಗಳನ್ನು ನಿಯಮಾನುಸಾರ ಕೈಗೊಳ್ಳಲಾಗುತ್ತಿದ್ದು, ಕಾಮಗಾರಿಗಳಿಗೆ ಬಿಲ್ ಪಾವತಿಸುವಾಗ ಕಂಡಿಕೆ 'ಆ' ರಲ್ಲಿ ವಿವರಿಸಿದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ:ಜಸಂಇ 120 ಎನ್‌ಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು